

# ಗಳಿಸಿದ್ದೆಲ್ಲ ಮಕ್ಕಳಿಗೆ ಕೊಟ್ಟರೆ...

ಮಕ್ಕಳ ಮೇಲಿನ ವ್ಯಾಮೋಹ ತಂದೆ–ತಾಯಿಯರ ಬದುಕನ್ನು ಕೊನೆಗಾಲದಲ್ಲಿ ಕತ್ತಲೆಗೆ ದೂಡಬಹುದು. ತಾವು ಸಂಪಾದಿಸಿದ ಆಸ್ತಿಯನ್ನು ಮಕ್ಕಳಿಗೆ ಕೊಡುವಾಗ ಹಿರಿಯರು ವಹಿಸಬೇಕಾದ ಎಚ್ಚರಿಗಳೇನು?

■ ಸೌಮ್ಯಲಕ್ಷ್ಮೀ ಕುಕ್ಕಜೆ
ನ್ಯಾಯವಾದಿ

ಅದೊಂದು ಗುರುವಾರದ ಮಧ್ಯಾಹ್ನ. ಬಿಸಿಲಿಗೆ ನಡಕೊಂಡು ಬಂದದ್ದರಿಂದ ಬೆವರಿದ್ದ ಮುಖವನ್ನು, ತಮ್ಮ ಪ್ಯಾಂಟಿನ ಬಲಜೇಬಿನಿಂದ ಕರ್ಚೀಫ್ ತೆಗೆದು ಒರೆಸಿಕೊಂಡರು. ಅದು, ಪೊಲೀಸ್ ಕಮಿಷನರ್ ಆಫೀಸಿನಲ್ಲಿ ಒಂದು ಎನ್. ಜಿ.ಓ. ನಡೆಸುವ ಹಿರಿಯರ ಸಹಾಯವಾಣಿ. ನಿಂತುಕೊಂಡೇ ಕೈಮುಗಿದು, ‘ನಮಸ್ಕಾರ ಮೇಡಂ’ ಅಂದರು. ‘ಕೂತ್ಕೊಳ್ಳಿ ಪ್ಲೀಸ್’ ಕುರ್ಚಿ ತೋರಿಸಿದೆ. ಅವರ ಕೈ ತುಸು ನಡುಗುತ್ತಿತ್ತು. ಹಾಗೆಯೇ ತಮ್ಮ ಪ್ಲಾಸ್ಟಿಕ್ ಚೀಲದಿಂದ, ಕೋರ್ಟಿನಿಂದ ತಮಗೆ ಬಂದ ನೋಟಿಸ್ ತೆಗೆದು ತೋರಿಸಿದರು. ‘ನನ್ನ ಹಿರೀಮಗ ಮೇಡಂ. ಅವನು, ಸೊಸೆ, ಅವರ ಆರು ವರ್ಷದ ಮಗ, ನಾನು ಜೊತೆಗೇ ಇದೀವಿ. ಈಗ ನನ್ನ ಮೇಲೆ ಕೇಸ್ ಹಾಕಿದ್ದಾನೆ. ಮನೆಯಲ್ಲಿ ಅರ್ಧ ಪಾಲು ಅವನದ್ದು ಅಂತಾನೆ.’ ತಕ್ಷಣ ತಲೆಯೆತ್ತಿ ಅವರನ್ನು ನೋಡಿದೆ. ಅವರ ಕಣ್ಣುಗಳಲ್ಲಿದ್ದ ನೋವನ್ನು ಎದುರಿಸಲಾಗದೇ ಮತ್ತೇ ನೋಟಿಸ್, ಜೊತೆಗಿದ್ದ ದಾವೆಯ ಕಾಗದಗಳ ಮೇಲೆ ಕಣ್ಣುಹಾಯಿಸಿದೆ.

ಅವರು ಪ್ರತಿಷ್ಠಿತ ವಾಚ್ ಕಂಪನಿಯೊಂದರಲ್ಲಿ ‘ಸೀನಿಯರ್ ಟೆಕ್ನೀಶಿಯನ್’ ಆಗಿ ನಿವೃತ್ತಿ ಹೊಂದಿದ್ದರು. ಅದನ್ನು ಹೇಳುವಾಗ ಅವರ ಕಣ್ಣಲ್ಲೊಂದು ಅಪೂರ್ವ ಹೊಳಪು ಕಂಡು ಮನಸ್ಸು ಇನ್ನೂ ಮೆದುವಾಯಿತು! ತಮ್ಮ ಕಂಪನಿಯಲ್ಲಿ ಅವಾರ್ಡ್ ತೆಗೆದುಕೊಳ್ಳುತ್ತ ತೆಗೆಸಿಕೊಂಡ ಫೋಟೊಗಳನ್ನೂ ಆಸಕ್ತಿಯಿಂದ ತೋರಿಸಿದರು. ಏನೋ ಹೇಳಲು ಮುಂದಾದವರು, ‘ಮೇಡಂ, ತಪ್ಪು ತಿಳೀಬೇಡಿ. ವಯಸ್ಸಾಗ್ತಾ ಕಣ್ಣು ಸ್ವಲ್ಪ ಮಂಜಾಗಿದೆ. ಹಾಗಾಗಿ ನಾನು ನಿಮ್ಮ ಮುಖವನ್ನೇ ಎವೆಯಿಕ್ಕದೆ ನೋಡಿದಂತೆ ಅನಿಸಬಹುದು ನಿಮಗೆ’ ಅಂದರು.

ಮದುವೆಯಾದ ಮೇಲೆ, ಹೆಂಡತಿಗೆ ಎರಡು ಬಸಿರು ನಿಲ್ಲದೆ, ಏನೇನೊ ಔಷಧಿ, ಪೂಜೆ ಪ್ರಾರ್ಥನೆಗಳ ನಂತರ ಈ ಮಗ ಹುಟ್ಟಿದ್ದ. ನಾಗದೇವರ ಹೆಸರನ್ನೇ ಮಗನಿಗೂ ಇಟ್ಟು ಸಂಭ್ರಮಿಸಿದ್ದರು. ನಂತರ ಒಬ್ಬ ಮಗ, ಒಬ್ಬಳು ಮಗಳು ಹುಟ್ಟಿದರು. ಮಗ ಏನೂ ಓದಲೂ ಇಲ್ಲ, ಕೆಲಸವೂ ಚಿಕ್ಕಪುಟ್ಟದೇನೋ ಮಾಡುತ್ತಿದ್ದ. ಮದುವೆಯಾದ ಮೇಲೂ